ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ

ಸಿ.ಸಿ. ನಂ. 1238-2025
ಸಿ.ಡಬ್ಲ್ಯೂ.3 ಪಿ.ಡಬ್ಲ್ಯೂ.2

| | | |
|---|---|---|
| ಸಾಕ್ಷಿಯ ಹೆಸರು | - | ಪ್ರಶಾಂತರಡ್ಡಿ |
| ತಂದೆಯ ಹೆಸರು | - | ಸುಭಾಸರಡ್ಡಿ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಒಕ್ಕಲುತನ |
| ವಾಸ | - | ಅಲ್ಲೂರ. |

ದಿನಾಂಕಃ 10-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನನಗೆ ಚಾಸಾ.1, 4 ರಿಂದ 6 ಹಾಗೂ ಆರೋಪಿತನ ರವರ ಪರಿಚಯ ಇರುತ್ತದೆ.

ಸಾಕ್ಷಿಯು ಪಂಚನಾಮೆ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

ನಿಪಿ.3 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

ಸುಮಾರು ಒಂದು ವರ್ಷದ ಹಿಂದೆ ನಾನು ನಮ್ಮೂರಿನ ಹತ್ತಿರ ಇರುವ ರೈಲ್ವೇ ಟ್ರ್ಯಾಕ ಹತ್ತಿರ ನಿಪಿ.2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ, ಆಲಿಸಿ ಅನುಮತಿಯನ್ನು ನೀಡಲಾಯಿತು.)**

ಪಾಟೀ ಸವಾಲು: ಮಾನ್ಯ ಶ್ರೀ ಸ.ಸ.ಅ . ರವರಿಂದ:

ದಿನಾಂಕ 23.01.2025 ರಂದು ಸಾಯಂಕಾಲ 5.30 ರಿಂದ 6.30 ಗಂಟೆಯವರೆಗೆ ನನ್ನ ಹಾಗೂ ಚಾಸಾ.2 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನಿಂದ 180 ಎಂ.ಎಲ್. ಓ.ಸಿ. ವಿಸ್ಕಿ 2 ಪ್ಯಾಕೇಟಗಳು, 180 ಎಂ.ಎಲ್. ಬ್ಯಾಗ ಪೇಪರ 1 ಪ್ಯಾಕೇಟ, 180 ಎಂ.ಎಲ್. ಓ.ಟಿ. 5 ಪ್ಯಾಕೇಟ, 90 ಎಂ.ಎಲ್. ಓ.ಸಿ. 42 ಪ್ಯಾಕೇಟಗಳು ಮತ್ತು ಒಂದು ಕಪ್ಪು ಬಣ್ಣದ ಪ್ಲಾಸ್ಟೀಕ ಚೀಲ ಜಪ್ತಿ ಪಡಿಸಿಕೊಮಡಿರುತ್ತಾರೆ

ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ ಸರಾಯಿ ಪಾಕೇಟಗಳು ಪ್ರತ್ಯೇಕವಾಗಿ ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿ ಕಟ್ಟಿ ಹೊಲೆದು ಅದಕ್ಕೆ ಐ.ಬಿ.ಐ. ಅರಗಿನ ಸೀಲ್ ಮಾಡಿ ಚೀಲಗಳ ಮೇಲೆ ನನ್ನ ಹಾಗೂ ಚಾಸಾ.2 ರವರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ.1 ರವರ ಮು.ಮಾ. ಆರೋಪಿತನನ್ನು ತಮ್ಮ ತಾಬೆಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ಹಾಗೂ ಚಾಸಾ.2 ರವರ ಸಮಕ್ಷಮ ನಿಪಿ.2 ರ ಪ್ರಕಾರ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದರು ಸಹ ಪಂಚನಾಮೆ ಮಾಡಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿತರ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನೀವೇದಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.